ಎಂ ವಿ ಸಿ. ನಂ. 299/2024 ಪಿಡಬ್ಲೂಃ 1

ದಿನಾಂಕಃ 16-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ನೇ ಎದುರುದಾರರ ಪರವಾಗಿಃ ಶ್ರೀ ವಾಯ್ ವಿ ಎಸ್ ವಕೀಲರಿಂದಃ**

6. ಟಾಟಾ ಟಿಪ್ಪರ ವಾಹನ ಸಂಖ್ಯೆ ಕೆಎ /47-9764 ನಾಲ್ಕನೇ ಎದುರುದಾರರಿಂದ ಖರೀದಿ ಮಾಡಿದ ದಿನಾಂಕ ನೆನಪಿಲ್ಲ. ಒಂದು ವರ್ಷ. ಜನೇವರಿ 2024 ರಲ್ಲಿ ಖರೀದಿ ಮಾಡಿರುತ್ತೇನೆ. 3-4 ದಿನಕ್ಕೆ ನನ್ನ ಹೆಸರಿಗೆ ಟ್ರಾನ್ಸಫರ್ ಆಗಿತ್ತು . ನಾನು ಸದರಿ ವಾಹನಕ್ಕೆ 3 ನೇ ಮಾಲೀಕ . ಸದರಿ ವಾಹನ 2014 ರ ಮೊಡೆಲ್ . ನಾನು ಖರೀದಿ ಮಾಡಿದಾಗ ಸದರಿ ವಾಹನ 1,64,000 ಸಾವಿರ ಕಿಲೋ ಮೀಟರ್ ರನ್ ಆಗಿತ್ತು . ವಾಹನವನ್ನು ಆರುವರೆ ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿರುತ್ತೇನೆ. ನನ್ನ ಹಾಗೂ ವಾಹನ ಮಾಲೀಕರ ನಡುವೆ ಯಾವುದೇ ಅಗ್ರಿಮೆಂಟ್ ಆಗಿರಲಿಲ್ಲ. ನಾನು ಖರೀದಿ ಮಾಡಿದಾಗ ವಾಹನ ಕಂಡಿಷನ್ ದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ನಾನು ಖರೀದಿ ಮಾಡಿದ ನಂತರ 2 ರಿಂದ 3 ಸಾವಿರ ಕಿ ಮೀ. ಓಡಿಸಿರುತ್ತೇನೆ. ಬಡಾಳದಿಂದ ಕುಮಟಾಗೆ ಕಲ್ಲು ಸಾಗಾಣಿಕೆ ಮಾಡುತ್ತಿದ್ದೆ. ಮೊದಲಿನ ಮಾಲೀಕರು ಕೂಡ ಕಲ್ಲು ಸಾಗಾಣಿಕೆ ಮಾಡುತ್ತಿದ್ದರು . ಪ್ರಾರಂಭದಿಂದಲೂ ಕಲ್ಲು ಸಾಗಾಣಿಕೆಗೆ ಉಪಯೋಗಿಸಿದ ವಾಹನ ಆಗಿತ್ತು. ನಾನು ವಾಹನವನ್ನು ಆರುವರೆ ಲಕ್ಷಕ್ಕೆ ಖರೀದಿ ಮಾಡಿಲ್ಲ . ಅದು ಒಳ್ಳೆಯ ಕಂಡಿಷನ್ ನಲ್ಲಿ ಇರಲಿಲ್ಲ . ನಾನು ಕಡಿಮೆ ಬೆಲೆಯಲ್ಲಿ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ.

7. ಅಪಘಾತದ ಬಗ್ಗೆ 3 ನೇ ಎದುರುದಾರ ಕಂಪನಿ ಹೊನ್ನಾವರಕ್ಕೆ ಅಪಘಾತದ ಮಾರನೇ ದಿನ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ಮಾಹಿತಿ ನೀಡಿರುತ್ತೇನೆ. ಅರ್ಜಿ ಹಾಗೂ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿದ್ದೆ ಆದರೆ ಅವರು ಯಾವುದನ್ನು ತೆಗೆದುಕೊಳ್ಳಲಿಲ್ಲ . ನಾನು ಯಾವುದೇ

ಪಿಡಬ್ಲ್ಯೂ: 1

ರಜಿಸ್ಟರ್ ಪೋಸ್ಟನ್ನು ಅವರಿಗೆ ಕಳುಹಿಸಿಲ್ಲ. ನಮ್ಮ ವಾಹನದ ವಿಮಾ ಕಂಪನಿಗೆ ಅಪಘಾತದ ಬಗ್ಗೆ ತಿಳಿಸುವ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸಾಕ್ಷಿ ಹೋಗಿದ್ದೆ, ಆದರೆ ಅವರು ದಾಖಲಾತಿ ತೆಗೆದುಕೊಳ್ಳಲಿಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ತಿಳಿಸುವ ಬಗ್ಗೆ ನಾನು ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಸರಿ . ನಾನು ಅವರ ಮೇಲಾಧಿಕಾರಿಗಳಿಗೆ ತಿಳಿಸಿಲ್ಲ. ನಾನು ಯಾವುದೇ ಕಾಲಕ್ಕೆ ಅಪಘಾತದ ನಂತರ 3 ನೇ ಎದುರುದಾರ ವಿಮಾ ಕಂಪನಿ ಹೊನ್ನಾವರ ಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ . ಅಪಘಾತದ ಬಗ್ಗೆ ನಾನು 3 ನೇ ಎದುರುದಾರರ ಬಗ್ಗೆ ತಿಳಿಸಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ .

8. ದುರ್ಗಾ ಗ್ಯಾರೇಜ್ ಚಂದಾವರದ ಚರ್ಚ ಹತ್ತಿರ ಇದೆ. ಗ್ಯಾರೇಜ್ ನ ಮಾಲೀಕರ ಪೂರ್ಣ ಹೆಸರು ಗೊತ್ತಿಲ್ಲ , ಆದರೆ ಆಚಾರಿ ಎಂದು ಕರೆಯುತ್ತಾರೆ . ನಾನು ಅವರ ಬಳಿ ನನ್ನ ವಾಹನವನ್ನು ರಿಪೇರಿ ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ರಿಪೇರಿ ಸಲುವಾಗಿ 3,99,000/- ರೂ. ಖರ್ಚು ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ದಿಃ 14-02-2024 ರಿಂದ ದಿಃ 15-04-2024 ರವರೆಗೆ ವಾಹನ ಗ್ಯಾರೇಜ್ ನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ನಾನು ಹೇಳುವಂತೆ ಆ ವಾಹನದಿಂದ ನನಗೆ ಪ್ರತಿದಿನ 3 ಸಾವಿರ ರೂಪಾಯಿ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ನಿಪಿ -4 ಸರ್ವೆ ರಿಪೋರ್ಟನ್ನು ಮಾಡಿದ ಭವಾನಿ ಶಂಕರ ನಾಯ್ಕ ಇವರು ಯಾವುದೇ ಇನ್ಸುರೆನ್ಸ ಕಂಪನಿಯ ಅಪ್ರುಡ್ ವೆಲ್ಯೂವರ್ ಅಲ್ಲ ಎಂದರೆ ಸಾಕ್ಷಿ ಅವರು ತಾನು ನ್ಯಾಷನಲ್ ಇನ್ಸುರೆನ್ಸ ಕಂಪನಿಯ ಅಪ್ರುಡ್ ವೆಲ್ಯೂವರ್ ಎಂದು ಹೇಳಿದ್ದರು ಎಂದು ನುಡಿದಿರುತ್ತಾರೆ . ಭವಾನಿ ಶಂಕರ ನಾಯ್ಕರವರು ಇಂತಹ ಗಾಡಿ ನನಗೆ ವ್ಯಾಲುವೇಶನ್ ರಿಪೋರ್ಟ ಕೊಡಲು ಬಂದಿದೆ ಎಂದು ಇನ್ಸುರೆನ್ಸ ಕಂಪನಿಗೆ ತಿಳಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ . ನಿಪಿ-4 ವರದಿಯಲ್ಲಿ ಕಾಣಿಸಿದಂತೆ ನನ್ನ ವಾಹನ ಡ್ಯಾಮೇಜ್ ಆಗಿಲ್ಲ ಎಂದರೆ ಸರಿಯಲ್ಲ . ನಿಪಿ-4 ವರದಿಯಲ್ಲಿ ಕಾಣಿಸಿದಂತೆ ಅಷ್ಟು ಮೊತ್ತದ ಡ್ಯಾಮೇಜ್ ಆಗಿರಲಿಲ್ಲ ಎಂದರೆ ಸರಿಯಲ್ಲ. ಅವರ ಮೇಲೆ ಪ್ರಭಾವ ಬೀರಿ ಪರಿಹಾರ ಪಡೆಯಲು ಸುಳ್ಳು ವರದಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವರದಿಯನ್ನು ಇನ್ಸುರೆನ್ಸ ಕಂಪನಿಗೆ ಸಬ್ ಮಿಟ್ ಮಾಡಿ

ಎಂದು ನಾನು ಅವರಿಗೆ ಹೇಳಿಲ್ಲ. ಫೋಟೋದಲ್ಲಿ ಕಾಣಿಸಿದಷ್ಟು ಡ್ಯಾಮೇಜ್ ವಾಹನಕ್ಕೆ ಆಗಿಲ್ಲ ಎಂದರೆ ಸರಿಯಲ್ಲ. ಕಾರು ಹಿಂದಿನಿಂದ ಓವರಟೆಕ್ ಮಾಡಿಕೊಂಡು ಬಂದು ನಮ್ಮ ವಾಹನದ ಮುಂದಿನ ಬಲಗಡೆಯ ಟೈಯರ್ ಗೆ ಡಿಕ್ಕಿ ಮಾಡಿರುತ್ತದೆ . ನಿಪಿ-6 ದುರ್ಗಾ ಗ್ಯಾರೇಜ್ ನವರು ನೀಡಿದಂತಹ ಬಿಲ್ . ನಿಪಿ-6 ರಲ್ಲಿ ಕಾಣಿಸಿದಷ್ಟು ಬಿಡಿ ಭಾಗಗಳನ್ನು ಅವರು ಬದಲಾಯಿಸಿಲ್ಲ ಎಂದರೆ ಸರಿಯಲ್ಲ . ಅದರಲ್ಲಿ ಕಾಣಿಸಿದ ಬಿಡಿ ಭಾಗಗಳಿಗೆ ಆ ಕಾಲದಲ್ಲಿ ಅಷ್ಟು ದರ ಇಲ್ಲವಾಗಿತ್ತು ಎಂದರೆ ಸರಿಯಲ್ಲ. ವಾಹನ ಈಗ ನನ್ನ ತಾಬಾದಲ್ಲಿ ಇದೆ. ನಿಪಿ-6 ದುರ್ಗಾ ಗ್ಯಾರೇಜ್ ನ ಬಿಲ್ ನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ವಾಹನ ರಿಪೇರಿ ನಂತರ ರಿಪೇರಿ ಮಾಡಿಸಿದ್ದೇನೆ ಎಂತ ತೋರಿಸಲು ವಾಹನದ ಸ್ಥಿತಿ ಬಗ್ಗೆ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ಪ್ರತಿದಿನ ಮೂರು ಸಾವಿರ ರೂಪಾಯಿ ಆದಾಯ ಇತ್ತು ಎಂದು ತೋರಿಸಲು ನನ್ನ ಮೌಖಿಕ ಸಾಕ್ಷಿಯನ್ನು ಹೊರತು ಪಡಿಸಿ ಬೇರೆ ದಾಖಲಾತಿ ಇಲ್ಲ . ಚಂದಾವರ ಕೋರೆ ಯ ಸಂತೋಷ ನಾಯ್ಕು ಹಾಗೂ ಮೂರೂರು ಕೋರೆ ನಾಗಪ್ಪ ಗೌಡ ರವರು ಬಾಡಿಗೆ ಹೊಡೆಯಲು ಹೇಳುತ್ತಿದ್ದರು . ಪೆಮೆಂಟ್ ಅವರೇ ಮಾಡುತ್ತಿದ್ದರು . ಅವರಿಬ್ಬರ ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ . ನಾನು 3 ನೇ ಅರ್ಜಿದಾರರ ವಿರುದ್ಧ ಕಂಜುಮರ್ ಕೋರಂ ನಲ್ಲಿ ಅರ್ಜಿ ದಾಖಲು ಮಾಡಿಲ್ಲ. 3 ನೇ ಎದುರುದಾರರ ವಿರುದ್ಧ ಈ ಅರ್ಜಿ ಈ ಪ್ರಾಧಿಕಾರದಲ್ಲಿ ನಡೆಯುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿ ಹಾಗೂ ಪ್ರಮಾಣ ಪತ್ರದಲ್ಲಿ ಬರೆಸಿದಂತೆ ರೂ . 6,613/- ಸರ್ವೆ ವ್ಯಾಲುವೇಶನ್ ಶೀಟ್ ಕೊಟ್ಟಿಲ್ಲ ಎಂದರೆ ಸರಿಯಲ್ಲ . ವಾಹನ ರಿಪೇರಿ ವಗೈರೆಗೆ 6 ಲಕ್ಷ ರೂಪಾಯಿ ಖರ್ಚು ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . 3 ನೇ ಎದುರದಾರ ವಿಮಾ ಕಂಪನಿ ಈ ಕೇಸಿಗೆ ಅವಶ್ಯಕ ಪಕ್ಷಗಾರರಲ್ಲ ಎಂದರೆ ಸರಿಯಲ್ಲ . 3 ನೇ ಎದುರುದಾರ ವಿಮಾ ಕಂಪನಿಯನ್ನು ಅನಾವಶ್ಯಕವಾಗಿ ಈ ಕೇಸಿಗೆ ಸೇರಿಸುವುದರಿಂದ ಖರ್ಚು ಕೊಡಲು ಭಾಧ್ಯಸ್ಥರು ಎಂದರೆ ಸರಿಯಲ್ಲ. 3 ನೇ ಅರ್ಜಿದಾರರ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿಡಬ್ಲ್ಯೂ: 1

4 ನೇ ಎದುರುದಾರ ಪರ ವಕೀಲರನ್ನು ಕೂಗಿಸಿ ಕ ರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.